ಅಧ್ಯಕ್ಷರು : ಮತ್ತೆ clarifications ಗೆ ಅವಕಾಶವಿಲ್ಲ. ಪ್ಲೀಸ್,

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕಾನೂನನ್ನೆಲ್ಲಾ ಉಲ್ಲಂಘನೆ ಮಾಡಿಬಿಟ್ಟಿದ್ದಾರೆ. Setback ಗಳನ್ನು ಬಿಟ್ಟಿಲ್ಲ. ಅವರು township ಮಾಡುತ್ತೇವೆಂದು ಹೇಳಿ ದೊಡ್ಡ ದೊಡ್ಡ villas ಗಳನ್ನು ಮಾಡಿಕೊಂಡು ಎಲ್ಲಾ ಮೂರರಿಂದ ನಾಲ್ಕು ಕೋಟಿ ರೂಪಾಯಿಗಳಿಗೆ ಮಾರಿಕೊಂಡಿದ್ದಾರೆ. ಸರ್ಕಾರದ ಜಮೀನುಗಳನ್ನು ಅಕ್ರಮವಾಗಿ encroach ಮಾಡಿಕೊಂಡಿದ್ದಾರೆ. ಅಲ್ಲಿ buildings ಕಟ್ಟಿಕೊಂಡಿದ್ದಾರೆ. merely on the ground that it is donated.

ಅಧ್ಯಕ್ಷರು : Clarifications ಸಾಕಷ್ಟು ಕೊಟ್ಟಿದ್ದಾರೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ರಾತ್ರಿ 10.04 ಗಂಟೆಗೆ ಮುಕ್ತಾಯಗೊಂಡು
ಪುನಃ ದಿನಾಂಕ: 15.03.2011ರಂದು ಬೆಳಿಗ್ಗೆ 11.00 ಗಂಟೆಗೆ
ಸಮಾವೇಶಗೊಳ್ಳಲು ನಿರ್ಣಯಿಸಿತು.)

* * * * *

ಅನುಬಂಧ – I

ಗ್ರಾಮಗಳ ಮುಳುಗಡೆ

728(861) ಶ್ರೀ ಅಪ್ಪಾಜಿ.ಸಿ.ಎಸ್.ನಾಡಗೌಡ (ಮುದ್ದೇಬಿಹಾಳ): ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಿಂದ ಮುದ್ದೇಬಿಹಾಳ ತಾಲ್ಲೂಕಿನ ದೇವರು, ಗಂಗೂರು, ಕುಂಚಗನೂರು, ಹಡಗಲಿ ಮತ್ತು ಹುನಕುಂಟೆ ಗ್ರಾಮಗಳು ಮುಳುಗಡೆಯಾಗಲಿವೆಯೇ ;

ಆ) ಗ್ರಾಮದಲ್ಲಿ ಹಿನ್ನೀರಿನಿಂದ ಇಲ್ಲಿಯ ರೈತರು ಮಲೇರಿಯಾ ರೋಗದಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಗ್ರಾಮಗಳನ್ನು ಯಾವಾಗ ಸ್ಥಳಾಂತರಿಸಲಾಗುವುದು ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಿಂದ ಮುದ್ದೇಬಿಹಾಳ ತಾಲ್ಲೂಕಿನ ದೇವೂರು, ಗಂಗೂರು, ಕುಂಚಗನೂರು, ಹಡಗಲಿ ಮತ್ತು ಹುನಕುಂಟೆ ಗ್ರಾಮಗಳು ಮುಳುಗಡೆಯಾಗುವುದಿಲ್ಲ. ಆದರೆ, ಈ ಗ್ರಾಮಗಳ ಕೆಲವು ಭಾಗಗಳಲ್ಲಿ ಹೆಚ್ಚುವರಿ ನೀರಿನಿಂದ ಬಾಧಿತವಾಗುತ್ತದೆ ಎಂದು ಇತ್ತೀಚಿನ ಸರ್ವೆ ಪ್ರಕಾರ ತಿಳಿದು ಬಂದಿದೆ.

ಆ) ಸದರಿ 5 ಗ್ರಾಮಗಳು ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಿಂದ ಮುಳುಗಡೆಯಾಗದಿದ್ದರೂ 2009–10ನೇ ಸಾಲಿನಲ್ಲಿ ಅತೀವೃಷ್ಟಿಯ ಕಾರಣ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನ ಪ್ರವಾಹದಿಂದ ಸದರಿ ಗ್ರಾಮಗಳ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದ್ದು, ಇದರಿಂದ ಮೇಲೇರಿಯಾ ರೋಗವು ಅಲ್ಪ ಪ್ರಮಾಣದಲ್ಲಿ ಉಲ್ಬಣಗೊಂಡು ಇಲ್ಲಿಯ ಜನರು ಬಾದಿತಗೊಂಡಿದ್ದರು. ಬಾದಿತಗೊಂಡ ಜನರಿಗೆ ಸೂಕ್ತ ಸಮಯದಲ್ಲಿ ರೋಗ ನಿರ್ಮೂಲನಾ ಚಿಕಿತ್ಸೆ ನೀಡಲಾಯಿತು.

ಇ) ಈ ಗ್ರಾಮಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆನೆ ಮಾವುತರ ಸಮಸ್ಯೆಗಳು

729 (862) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಅರಣ್ಯ ಇಲಾಖೆಯ ಅಧೀನದಲ್ಲಿ ಸಾಕಿರುವ ಆನೆಗಳ ಸಂಖ್ಯೆ ಎಷ್ಟು ;

ಆ) ಈ ಆನೆಗಳ ದಿನನಿತ್ಯದ ಪಾಲನೆಗೆ ನೇಮಿಸಿದಂತಹ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ;

ಇ) ವಿಶೇಷವಾಗಿ ಆನೆಗಳ ಮಾವುತರ ಸೇವೆಯನ್ನು ಇಲ್ಲಿಯವರೆಗೂ ಖಾಯಂಗೊಳಿಸದೆ ಇರಲು ಕಾರಣಗಳೇನು ?

ಶ್ರೀ ಸಿ.ಎಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ ಒಟ್ಟು 90 ಆನೆಗಳನ್ನು ಸಾಕಲಾಗುತ್ತಿದೆ.